- ನೀರು ಸರಬರಾಜು ಯೋಜನೆ (26.6 ಕೋಟಿ),
- ಪ್ರವಾಸೋದ್ಯಮ ಅಭಿವೃದ್ಧಿ (ರೂ. 2.18 ಕೋಟಿ),
- ಕೊಳಚೆ ಪ್ರದೇಶಾಭಿವೃದ್ಧಿ (ರೂ. 1.42 ಕೋಟಿ), ಅಗ್ನಿಶಾಮಕ ಮತ್ತು ತುರ್ತು ಸೇವೆಗಳು (ರೂ. 0.89 ಕೋಟಿ)

ಬಸವ ಕಲ್ಯಾಣದಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿ

118 (299) ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಯಾವ ಯಾವ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ;

ಆ) ಈ ಸ್ಥಳವನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕಳೆದ ಮೂರು ವರ್ಷಗಳಿಂದ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಇ) ಬಸವಕಲ್ಯಾಣ ತಾಲ್ಲೂಕಿನ ಯಾವ ಯಾವ ಪ್ರವಾಸಿ ಸ್ಥಳದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ನೆರವು ಕೋರಲಾಗಿದೆ;

ಈ) ಈ ಬಗ್ಗೆ ಕೇಂದ್ರದಿಂದ ಇಲ್ಲಿಯವರೆವಿಗೆ ಬಂದಿರುವ ಹಣದ ಮೊತ್ತವೆಷ್ಟು;

ಉ) ಬಸವಕಲ್ಯಾಣದಲ್ಲಿ ಪ್ರವಾಸಿಗರು ಹಾಗೂ ಭಕ್ತಾಧಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಬಸವಕಲ್ಯಾಣವನ್ನು ಪ್ರವಾಸಿ ತಾಣವೆಂದು ಗುರುತಿಸಲಾಗಿದೆ. ಈ ಪ್ರವಾಸಿ ತಾಣದಲ್ಲಿ ಇರುವ ಪ್ರೇಕ್ಷಣೀಯ ಸ್ಥಳಗಳೆಂದರೆ,

1. ಬಸವಕಲ್ಯಾಣದ ಕೋಟೆ.
2. ಅಕ್ಕ ನಾಗಮ್ಮ ಗವಿ
3. ಅಲ್ಲಮಪ್ರಭು ಗದ್ದುಗೆ

4. ಮಡಿವಾಳ ಮಾಚಯ್ಯ ಹೊಂಡ
5. ಬಸವೇಶ್ವರ ದೇವಸ್ಥಾನ
6. ತ್ರಿಪುರಾಂಥೇಶ್ವರ ಕೆರೆ.
7. ಬಂದವರ ಓಣಿ.

ಆ) ಮೇಲ್ಕಂಡ ಸ್ಥಳಗಳನ್ನೊಳಗೊಂಡಂತೆ ಬೀದರ್ ಜಿಲ್ಲೆಯ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ರೂ.100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್‌ರವರಿಗೆ 2008-09ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.

ಇ) ಬಸವಕಲ್ಯಾಣ ತಾಲ್ಲೂಕಿನ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಇಲ್ಲಿಯವರೆವಿಗೆ ಕೇಂದ್ರ ಸರ್ಕಾರದ ನೆರವನ್ನು ಕೋರಿರುವುದಿಲ್ಲ. ಪ್ರಸ್ತುತ ವರ್ಷದಲ್ಲಿ ಬಸವಕಲ್ಯಾಣದಲ್ಲಿರುವ ತ್ರಿಪುರಾಂಥೇಶ್ವರ ಕೆರೆ ಹಾಗೂ ಬಂದವರ ಓಣಿಗಳ ಬಳಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ರೂ.500.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಇದನ್ನು ಕೇಂದ್ರ ಸರ್ಕಾರದ ನೆರವು ಕೋರಲು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ.

ಉ) ಬಸವಕಲ್ಯಾಣದಲ್ಲಿ ಪ್ರವಾಸಿಗರಿಗಾಗಿ ಯಾತ್ರಿನಿವಾಸ ನಿರ್ಮಿಸುವುದು, ಬಂದವರ ಓಣಿ ಬಳಿ ಪ್ರವೇಶದ್ವಾರ, ಬಸ್‌ಶೆಲ್ಟರ್, ವಾಹನ ನಿಲ್ದಾಣ, ವಾಚ್‌ಟವರ್, ಶೌಚಾಲಯಗಳು, ತಿನಿಸು ಅಂಗಡಿ ಇತ್ಯಾದಿಗಳನ್ನು ಹಾಗೂ ತ್ರಿಪುರಾಂಥೇಶ್ವರ ಕೆರೆಯ ಬಳಿ ವಾಕ್ ಪಥ, ಆಸನ ವ್ಯವಸ್ಥೆ, ಪರಗೋಲ ಸೋಲಾರ್ ದೀಪಗಳು ಇತ್ಯಾದಿಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ.